

ಗಲಾಟೆಯಲ್ಲಿ ಶೌಕತ್‌ನ ಡೆಲಿವರಿ ಮಾಡುವ ಕೆಲಸ ಸ್ಥಗಿತವಾಯಿತು. ಹಾಗಾಗಿ ಮತ್ತೆ ಅವನಿಗೆ ನೌಕರಿ ಇಲ್ಲ, ನಳಿನಿ ಜೊತೆ ಫೋನ್ ಸಂಪರ್ಕ ಇಟ್ಟುಕೊಂಡಿದ್ದ. 'ನೀನು ಲೋನಾವಾಲ ಕಡೆ ಬಾ' ಅಂತ ಅವಳು ಹೇಳುವಳು. ಆದರೆ ಇವನಿಗೆ ಮುಂಬಯಿ ಬಿಟ್ಟು ಮತ್ತೆ ಲೋನಾವಲಕ್ಕೆ ಹೋಗಲು ಇಷ್ಟ ಇರಲಿಲ್ಲ.

ಆ ದಿನ ಪಶ್ಚಿಮ ರೈಲಿನ ಎಲ್ಫಿಸ್ಟೈನ್ ರೈಲ್ವೆ ನಿಲ್ದಾಣದಲ್ಲಿ ಎಲ್ಲಿಲ್ಲದ ಜನ, ವಿಪರೀತ ಗರ್ದಿ. ಗಿಜಿಗುಡುವ ರೈಲ್ವೇ ಸ್ಟೇಷನ್‌ನಲ್ಲಿ ಜನರ ನಡುವೆ ಜಾಗ ಮಾಡಿಕೊಂಡು ಶೌಖತ್ ಬರುತ್ತಿದ್ದ. ಫ್ಲಾಟ್‌ಫಾರ್ಮ್‌ನ ತುದಿಯಲ್ಲಿ ಪ್ರಯಾಣಿಕರು ಹೊರಹೋಗುವಲ್ಲಿ ಟಿಕೆಟ್ ಕಲೆಕ್ಟರ್ ನಿಂತಿದ್ದ. ಇವನಲ್ಲಿ ಟಿಕೇಟ್ ಇಲ್ಲ! 'ಹಾಗಾದರೆ ದಂಡ ಕೊಡು' ಎಂದು ಟೀಸಿ ರಶೀದಿ ಫುಸ್ತಕವನ್ನು ತೆಗೆದು, 'ಹೆಸರೇನು?' ಎಂದು ಕೇಳಿದ, ತಕ್ಷಣ ಶೌಖತ್, ಪಟಕ್ ಅಂತ ಆ ರಶೀದಿ ಫುಸ್ತಕವನ್ನು ಟೀಸಿ ಕೈಯಿಂದ ಎಳೆದುಕೊಂಡು ಗರ್ದಿಯಿಂದ ಹಾದು ಹೊರಗೆ ಓಡಿ ಪರಾರಿಯಾದ. ಟೀಸಿ ಅವನ ಹಿಂದೆ ಓಡಿದರೂ ಪ್ರಯೋಜನವಾಗಲಿಲ್ಲ. ಆತ ಹೈರಾಣಾದ. ಅವನ ಸೇವಾವಧಿಯಲ್ಲಿ ಈ ತರಹ ಎಂದೂ ಆಗಿರಲಿಲ್ಲ, ಕೇಳಿರಲೂ ಇಲ್ಲ! ಆ ದಿನ ಸಂಗ್ರಹವಾದ ದಂಡದ ಪ್ರತಿ ಆ ರಶೀದಿ ಪುಸ್ತಕದಲ್ಲಿ ಇದೆ, ಅದನ್ನು ಇಲಾಖೆಗೆ ಕೊಡಬೇಕು. ಇದು ಟೀಸಿಗೆ ದೊಡ್ಡ ಫಜೀತಿಯಾಯಿತು.

ಶೌಖತ್ ರೈಲ್ವೆ ಸ್ಟೇಷನ್‌ನಿಂದ ಹೇಗಾದರೂ ಮಾಡಿ ಓಡಿ ತನ್ನ ಪಿ.ಜಿ.(ಪೇಯಿಂಗ್ ಗೆಸ್ಟ್ ) ಮನೆಯ ದಾರಿ ತಲುಪಿದ. ರಸ್ತೆಯಲ್ಲಿ ಎದುರುಗಡೆಯಿಂದ ಒಂದು ಆನೆ ಬರುತ್ತಿತ್ತು. ಜನರೆಲ್ಲ ಆನೆಯನ್ನು ಕುತೂಹಲದಿಂದ, ತಮಾಷೆಯಿಂದ ನೋಡುತ್ತಿದ್ದುರು. ಅಲ್ಲಿ ಒಬ್ಬ ತನ್ನ ಕಣ್ಣು ಮುಖವನ್ನು ಮೊಬೈಲ್‌ನಲ್ಲಿ ಇರಿಸಿ ಆಶೆಗಣ್ಣಿಂದ ಯೂಟ್ಯೂಬ್‌ನ ಅವನಿಗಿಷ್ಟವಾದ ಯಾವುದೋ ವಿಡಿಯೋ ನೋಡುತ್ತಿದ್. ಆ ವೇಳೆಗೆ ಆತನ ಹತ್ತಿರ ಬಂದ ಆನೆ ಗದರಿಸುವಂತೆ ಸೊಂಡಿಲನೆತ್ತಿತು. ಆಗ ಮಾವುತ ಅಂಕುಶದಿಂದ ಆನೆಯನ್ನು ತಿವಿದ ಬಿಟ್ಟ. ಆನೆ ಘೀಳಿಟ್ಟಿತು. ಆಗ ತಕ್ಷಣ ಎಚ್ಚೆತ್ತ ಮೊಬೈಲ್‌ಧಾರಿ ಆನೆಯನ್ನು ನೋಡಿದ. ಭಯದಿಂದ ಆತನ ಕೈಯಲ್ಲಿದ್ದ ಮೊಬೈಲ್ ಥಣಕ್ ಅಂತ ಶೌಖತ್‌ನ ಹತ್ತಿರ ಬಿತ್ತು. ಶೌಖತ್ ಮೊಬೈಲ್ ಎತ್ತಿಕೊಂಡು ಅವನಿಗಾಗಿ ಹುಡಕಾಡಿದ. ಆದರೆ ಆತ ಎತ್ತ ಹೋದನೋ ಗೊತ್ತೇ ಆಗಲಿಲ್ಲ!

ಶೌಖತ್ ತನ್ನ ಪೇಯಿಂಗ್ ಗೆಸ್ಟ್ ಮನೆ ತಲುಪಿದ. ಮನೆಯ ಮಾಲೀಕ ಗಾಯಕವಾಡ್ ಒಂದು ಮರಾಠಿ ಪತ್ರಿಕೆ ಓದುತ್ತಿದ್ದ. ಶೌಖತ್ ತುಸು ನಿಂತು ತಾನೂ ಆ ಪತ್ರಿಕೆ ಪಡೆದು ಕಣ್ಣಾಡಿಸಿದ. ಅದರಲ್ಲಿದ್ದ ಒಂದು ಜಾಹೀರಾತು ನೋಡಿದ. ಮಹಿಳಾ ಪೊಲೀಸ್ ಪ್ರವೇಶಕ್ಕೆ ಅರ್ಜಿ ಆಹ್ವಾನದ ವಿವರ ಅದರಲ್ಲಿತ್ತು. ನಳಿನಿಯೊಮ್ಮೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ಆಸೆ ವ್ಯಕ್ತಪಡಿಸಿದ್ದಳು. ಅವಳು ಶಾಲೆ, ಕಾಲೇಜಿನಲ್ಲಿ ಸ್ಪೋರ್ಟ್ಸ್‌ನಲ್ಲಿ ಚಾಂಪಿಯನ್ ಆಗಿದ್ದವಳು. ತೆಳ್ಳಗಿದ್ದರೂ ದೈಹಿಕವಾಗಿ ಸದೃಢವಾಗಿದ್ದಳು. ಶೌಖತ್ ನಳಿನಿಯೊಂದಿಗೆ ಆ ಜಾಹೀರಾತಿನ ವಿಚಾರ ಹೇಳಿ, 'ನಿನ್ನ ಸರ್‌ನೇಮ್ ಹೇಗೂ ಮರಾಠಿ, ಅರ್ಜಿ ಹಾಕು' ಎಂದು ಹೇಳಿದ. ನಳಿನಿಗೂ ಸರಿ ಎನಿಸಿತು. ಅಂದೇ ಅರ್ಜಿಯನ್ನು ಫೋಸ್ಟ್ ಮಾಡಿದಳು. ಮೂರು ತಿಂಗಳ ನಂತರ ಪೊಲೀಸ್ ಕ್ಯಾಂಪ್‌ನಿಂದ ಮುಂಬೈಗೆ ಟ್ರೈನಿಂಗ್‌ಗಾಗಿ ಕರೆ ಬಂತು. ಎರಡು ತಿಂಗಳ ಸತತ ಟ್ರೈನಿಂಗ್ ನಂತರ ನಳಿನಿ ಭಂಡಾರಿಗೆ ಆಯ್ಕೆ ಪತ್ರ ಬಂತು. ಒಂದು ವರ್ಷದ ತರಬೇತಿಯನ್ನು ಮುಗಿಸಬೇಕು. ತರಬೇತಿಯ ಅವಧಿಯಲ್ಲಿ ಹಾಸ್ಟೆಲ್‌ನಲ್ಲಿ ಇರಬೇಕು. ಬೆಳಿಗ್ಗೆ 4 ಗಂಟೆಯ ಡ್ರಿಲ್ ಮತ್ತು ವ್ಯಾಯಾಮ ಕಡ್ಡಾಯ. ಆಹಾರದಲ್ಲಿ ಬೇಯಿಸಿದ ಮೊಟ್ಟೆ, ಹಾಲಿನ ಜೊತೆ,